

# ಜಾವೆಲಿನ್‌ನಲ್ಲಿ ಸಚಿನ್ ತೋಳ್ಬಲ

ಭಾರತದಲ್ಲಿ 'ಜಾವೆಲಿನ್ ಸಂಸ್ಕೃತಿ' ಈಗ ಉತ್ಕೃಷ್ಟ ಮಟ್ಟದಲ್ಲಿದೆ. ಇದಕ್ಕೆ ಕಾರಣರಾದ ನೀರಜ್ ಚೋಪ್ರಾ ಅವರ ಕಸುವು ಕಮರುತ್ತಿದೆ ಎಂಬ ಆತಂಕ ಮೂಡಿರುವ ಸಂದರ್ಭದಲ್ಲಿ ಮತ್ತೊಬ್ಬ ಜಾವೆಲಿನ್‌ಪಟು ಉದಯಿಸಿದ್ದಾರೆ. ಮೂಡುಬಿದಿರೆಯ ಆಳ್ವಾಸ್ ಕಾಲೇಜಿನಲ್ಲಿ ಓದಿದ ಉತ್ತರ ಪ್ರದೇಶದ ಸಚಿನ್ ಯಾದವ್ ಈಗ ಜಾವೆಲಿನ್ ಥ್ರೋ ಐಕಾನ್ ಆಗಿ ಮಾರ್ಪಟ್ಟಿದ್ದಾರೆ.

■ ವಿಕ್ರಂ ಕಾಂತಿಕೆರೆ

ದುಬೈ ಅಂತರರಾಷ್ಟ್ರೀಯ ಕ್ರಿಕೆಟ್ ಅಂಗಣದಲ್ಲಿ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಭಾರತ–ಪಾಕಿಸ್ತಾನ 'ಸಮರ'ದಲ್ಲಿ ಹಸ್ತಲಾಘವ ವಿವಾದ ನಡೆದು ನಾಲ್ಕೇ ದಿನಗಳು ಆಗಿದ್ದವು. ಜಪಾನ್ ರಾಜಧಾನಿ ಟೋಕಿಯೊದ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮತ್ತೊಂದು 'ಭಾರತ–ಪಾಕ್' ಹೋರಾಟಕ್ಕೆ 'ಫೀಲ್ಡ್' ಸಿದ್ಧಗೊಂಡಿತ್ತು. ಅದು ಅಂತರರಾಷ್ಟ್ರೀಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಜಾವೆಲಿನ್ ಥ್ರೋ ಸ್ಪರ್ಧೆ. ಭಾರತದ ನೀರಜ್ ಚೋಪ್ರಾ ಎರಡು ಸವಾಲುಗಳನ್ನು ಹೆಗಲಲ್ಲಿರಿಸಿಕೊಂಡು ಜಾವೆಲಿನ್ ಹಿಡಿದುಕೊಂಡಿದ್ದರು. ಒಂದು, ವಿಶ್ವ ಚಾಂಪಿಯನ್‌ಷಿಪ್‌ನ ಚಿನ್ನದ ಪದಕ ಉಳಿಸಿಕೊಳ್ಳುವುದು. ಎರಡು, ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಅಂಗಣದಲ್ಲಿ ಮತ್ತೊಮ್ಮೆ ಪಾರಮ್ಯ ಮೆರೆಯುವುದು. ಪಾಕಿಸ್ತಾನದ ಅರ್ಷದ್ ನದೀಂ ಕಳೆದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಗೆದ್ದ ಚಿನ್ನದ ಹೊಳಪು ಮಾಸಿಹೋಗದಂತೆ ನೋಡಿಕೊಳ್ಳಬೇಕಾದ ಸವಾಲಿನೊಂದಿಗೆ ಬಂದಿದ್ದರು. ಪೆಹಲ್ಗಾಂ ನರಹತ್ಯೆ ಮತ್ತು ಏಷ್ಯಾಕಪ್‌ನಲ್ಲಿ ಉಂಟಾದ ವಿವಾದದ ಛಾಯೆ ಈ ಸ್ಪರ್ಧೆಯ ಮೇಲೆಯೂ ಆವರಿಸಿತ್ತು. ಪ್ರೇಕ್ಷಕರ ನಿರೀಕ್ಷೆಗಳು 'ಮೌಂಟ್ ಫ್ಯೂಜಿ'ಯಷ್ಟು ಎತ್ತರಕ್ಕೆ ಏರಿದ್ದವು.

ಇಲ್ಲಿ ನಡೆದದ್ದು ನಿರೀಕ್ಷೆಗೂ ಮೀರಿದ ಬೆಳವಣಿಗೆಗಳು. ಟ್ರಿನಿಡಾಡ್ ಆ್ಯಂಡ್ ಟೊಬ್ಯಾಗೊದ ಕೇಶಾನ್ ವಾಲ್ಕಾಟ್ 88.16 ಮೀಟರ್ ಅಂತರದ ಸಾಧನೆಯೊಂದಿಗೆ ಚಿನ್ನ ಗೆದ್ದರೆ ಗ್ರೆನೆಡಾದ ಆ್ಯಂಡರ್ಸನ್ ಮತ್ತು ಅಮೆರಿಕದ ಕರ್ಟಿಸ್ ಥಾಮ್ಸನ್ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಗಳಿಸಿದರು.

ಭಾರತ–ಪಾಕಿಸ್ತಾನದ ಭರವಸೆಗಳು ಕ್ರಮವಾಗಿ 8 ಹಾಗೂ 10ನೇ ಸ್ಥಾನಕ್ಕೆ ಕುಸಿದವು. ಆದರೆ ಭಾರತದ ಪಾಲಿಗೆ ಬಲಿಷ್ಠ ತೋಳಿನ ಅಥ್ಲೀಟ್ ಉದಯಕ್ಕೆ ಟೋಕಿಯೊ ಸಾಕ್ಷಿಯಾಯಿತು. 40 ಸೆಂಟಿ ಮೀಟರ್ ಅಂತರದಲ್ಲಿ ಕಂಚಿನ ಪದಕ ಕಳೆದುಕೊಂಡ ಉತ್ತರ ಪ್ರದೇಶದ ಸಚಿನ್ ಯಾದವ್ ಇತ್ತೀಚೆಗೆ ಕಸುವು ಕ್ಷೀಣಿಸುತ್ತಿರುವ ನೀರಜ್‌ಗೆ ಪರ್ಯಾಯವಾಗಬಲ್ಲ ಎಸೆತಗಾರ ಎಂಬ




